ಬುಟ್ಟಿ, ಪಾತ್ರೆ, ಧಾನ್ಯ, ದಿನಸಿ ಸಾಮಾನು, ದನಕರು, ಬಟ್ಟೆ–ಬರೆ, ಮೀನು, ಮಾಂಸ ಎಷ್ಟೆಲ್ಲ ಸರಕುಗಳು ಈ ಸಂತೆಮಾಳದಲ್ಲಿ ಸಿಗುತ್ತವೆಯಲ್ಲ!

ಜ್ಯೂಲಿಯಸ್ ಈ ಪಟ್ಟಣಕ್ಕೆ ಮೊದಲು ಬಂದಾಗ ಮಾರ್ಕೆಟ್ಟಿನ ಗದ್ದಲ ಕಂಡು ಮೊದಮೊದಲು ರೋಸಿಹೋಗಿದ್ದ. ತಾನು ಹುಟ್ಟಿ ಬೆಳೆದ ಹಳ್ಳಿಯಲ್ಲಿದ್ದ ನೆಮ್ಮದಿ ಮತ್ತು ಈ ಊರಿನ ಗೌಜುಗದ್ದಲವನ್ನು ಹೋಲಿಸುತ್ತ ಕೂಡುತ್ತಿದ್ದ. ಆದರೆ ಉಮುರುವಿನಲ್ಲಿ ದಿನಗಳು ಸಾಗಿದಂತೆ ಅವನಿಗೆ ತನ್ನೂರಿಗಿಂತ ಈ ಊರೇ ಹೆಚ್ಚು ಇಷ್ಟವಾಗತೊಡಗಿತು. ಅವನ ಮೇಲಾಧಿಕಾರಿ ಹೊರಗೆ ಹೋಗಿದ್ದರೆ ಇಲ್ಲವೆ ನಿದ್ದೆ ಮಾಡುತ್ತಿದ್ದರೆ ಈತ ಕಿಟಕಿಯ ಹತ್ತಿರ ಬಂದು ಮಾರ್ಕೆಟ್ಟಿನ ಚೆಲುವನ್ನು, ಇಲ್ಲಿ ಸೇರಿರುವ ಚಿತ್ರವಿಚಿತ್ರ ಜನರನ್ನು ನೋಡುತ್ತ ನಿಲ್ಲುತ್ತಿದ್ದ. ಇಂದು ಬಂದವರು ನಿನ್ನೆ ಬಂದಿರಲಿಲ್ಲ! ನಿನ್ನೆ ಬಂದವರು ಮೊನ್ನೆ ಬಂದಿರಲಿಲ್ಲ. ಅಂದರೆ ನಿತ್ಯವೂ ಹೊಸ ಜನ ಬರುತ್ತಾರೆ ಎಂದಾಯಿತು. ಅದಕ್ಕೆ ಪೇಟೆ ತುಂಬಿ ತುಳುಕುತ್ತದೆ! ಜನ ಎಲ್ಲಿಂದ ಬರುತ್ತಾರೆ! ಎಷ್ಟೆಲ್ಲ ಬರುತ್ತಾರೆ! ಭೂಮಿಯ ಮೇಲೆ ಇಷ್ಟೊಂದು ಪ್ರಮಾಣದ ಜನಸಂಖ್ಯೆ ಇದೆಯೆ? ತಾನು ದಿನಂಪ್ರತಿ ಹೊಸ ಹೊಸ ಜನರನ್ನು ನೋಡುತ್ತೇನೆಂದ ಮೇಲೆ ಪ್ರಪಂಚದಲ್ಲಿ ಎಣಿಸಲಾರದಷ್ಟು ಮಂದಿ ಇರಬಹುದು! ಜ್ಯೂಲಿಯಸ್‌ನ ಕುತೂಹಲ ಎಂದಿಗೂ ತಣಿಯುತ್ತಿರಲಿಲ್ಲ. ಕೆಲವರು ಅವನೊಂದಿಗೆ ಹೇಳುತ್ತಿದ್ದರು – ಈ ಸಂತೆಗೆ ಬರುವ ಎಲ್ಲರೂ ನೈಜ ಮನುಷ್ಯರಲ್ಲ! ಅಂದರೆ? ಮಾರ್ಕೆಟ್ ಎಂಬುದು ಮಾಯಾವಿಗಳಿಂದ ತುಂಬಿ ತುಳುಕುತ್ತಿದೆಯೆ? ಅವನು ಕಂಪಿಸಿದ. ತನ್ನ ಪ್ರೀತಿಯ ಜಾನೆಟ್‌ಳ ತಾಯಿ ಸಹ ಅಂತಹ ಮಾತುಗಳನ್ನೆ ಆಡಿದಾಗ ಅವನಿಗೆ ಯಾವುದನ್ನು ನಂಬಬೇಕು, ಯಾವುದನ್ನು ಬಿಡಬೇಕು ಎಂದು ತಿಳಿಯಲಾರದಾಗಿತ್ತು.

'ಏಯ್ ಜ್ಯೂಲಿಯಸ್, ಮಾರ್ಕೆಟ್ಟಿನೊಳಗ ಇರೋ ಮಂದಿ ನೋಡಿ ಎಲ್ಲ ಖರೇ ಅಂತ ನೀ ತಿಳಕೊಬ್ಯಾಡ. ಅದರಾಗೂ ಪ್ಯಾಟಿಯೊಳಗ ಚೆಂದ ಚೆಂದ ಹೆಂಗಸರನ್ನ ಏನ್ ನೋಡ್ತೀಯಲ್ಲ, ಅವರು ರಕ್ತ–ಮಾಂಸಗಳಿಂದ ತುಂಬಿರೋ ಮನುಷ್ಯಾರು ಅಲ್ಲ. ಅವರೆಲ್ಲ ಈ ಆಳ ನದಿಯೊಳಗಿನ ನಾಡಿನೊಳಗ ಇರ್‍ತಾರು. ಸಂತಿ ದಿನ ಮುಂಜಾನಿ ಬಂದು ಸಂಜೀಕ ಮಾಯ ಆಗ್ತಾರ. ಆ ಪಾತಾಳಲೋಕ ಅಂತಹವರಿಂದಲೇ ತುಂಬೇದ ಅನಿಸ್ತದ. ನಮ್ಮ ಭೂಮಿ ಮ್ಯಾಲ ಅಷ್ಟೆಲ್ಲ ಚೆಂದ–ಛಾಯ ಇರೋ ಮನಸ್ಯಾರು ಸಿಗಲಿಕ್ಕೆ ಸಾಧ್ಯ ಐತೇನು?'

ಇಷ್ಟು ಕಲಿತವನಾಗಿ ಇಂತಹ ಮೂಢನಂಬಿಕೆಗಳನ್ನು ತಾನು ನಂಬಿದರೆ ಅದು ಅವನ ಗೌರವಕ್ಕೇನೆ ಚ್ಯುತಿ ಎಂಬುದು ಅವನಿಗೆ ಗೊತ್ತಿದೆ. ಆದರೆ ತನ್ನ ಭಾವೀ ಅತ್ತೆಯನ್ನು ಮೂಢಳೆಂದು ಹೇಳಿ ಅವಳೊಂದಿಗೆ ಕಲಹ ಮಾಡಿಕೊಳ್ಳಲಾದೀತೆ? ಅದೂ ಅಲ್ಲದೆ ಅವಳೊಂದಿಗೆ ವಾದಿಸಿ ಗೆಲ್ಲುವುದು ಈ ಜನ್ಮದಲ್ಲಿ ಸಾಧ್ಯವಿಲ್ಲವೆಂಬುದು ಅವನಿಗೆ ಇತ್ತೀಚೆಗೆ ಅರ್ಥವಾಗಿದೆ. ಸುಮ್ಮನೆ ಅತ್ತೆಯನ್ನು ಕೇಳಿದ: 'ಆಂಟಿ, ಹಂಗಾದ್ರ ಇವರು ಖರೇ ಮನುಷ್ಯಾರು, ಇವರು ಸುಳ್ಳು ಮನುಷ್ಯಾರು ಅಂತ ಗುರುತು ಹಿಡಿಯೋದು ಹೆಂಗ? ಅಲ್ಲದ, ಇವರು ಮತ್ಸ್ಯಗಂಧಿಯರು ಅಂತ ನಮ್ಮಂತಹ ಬಡಪಾಯಿಗಳಿಗೆ ತಿಳಿಯೋದು ಹೆಂಗ?'

'ಜ್ಯೂಲಿಯಸ್, ಅದನ್ನ ಅಗದೀ ಸರಳ ತಿಳಿಬಹುದು. ಪಾತಾಳದಿಂದ ಎದ್ದು ಬಂದಂತಹವರ ಬಣ್ಣ, ಚೆಲುವಿಕೆಗಳನ್ನ ನೋಡಿಯೇ ನೀನು ಅವರನ್ನ ಗುರುತು ಹಿಡೀಬಹುದು. ಅವರು ಈ ಜಗತ್ತಿನವರಂಗ ಇರೋದೇ ಇಲ್ಲ. ನೀ ಅವರನ್ನ ಸ್ವಲ್ಪ ವಾರೀನೋಟದಾಗ ನೋಡು, ಅವರನ್ನ ಪರೀಕ್ಷಿಸುವಂಗ ಕಣ್ಣಾಗ ಕಣ್ಣಿಟ್ಟು ನೋಡು. ಆಗ ಅವರು ನೀ ಇನ್ನೊಮ್ಮೆ ಕಣ್ಣು ಮಿಟುಕಿಸೋದರೊಳಗಾಗಿ ಮಟಾಮಾಯ ಆಗಿರ್‍ತಾರು.'

ಯಾವಾಗಲೂ ಝುಣಝುಣ ಎನ್ನುತ್ತಿದ್ದ, ಯಾವಾಗಲೂ ಅಸಾಧ್ಯ ಜನಜಂಗುಳಿಯಿಂದ ಕಿಕ್ಕಿರಿದಿರುತ್ತಿದ್ದ, ಜಗತ್ತಿನ ವ್ಯಾಪಾರ–ವಹಿವಾಟೆಲ್ಲ ಈ ಊರಿನಲ್ಲಿ ಮಾತ್ರ ನಡೆದಿದೆಯೇನೋ ಎನಿಸುವಂತಿದ್ದ ಮಾರ್ಕೆಟ್ ಮುಂದೊಂದು ದಿನ ಹೀಗೆ, ಇಷ್ಟು ಸ್ಮಶಾನಮೌನ ಹೊತ್ತು ಮಲಗಿರುತ್ತದೆಯೆಂದು ಯಾರು ಊಹಿಸಿದ್ದರು? ಯಾರು ಊಹಿಸಬಲ್ಲವರಾಗಿದ್ದರು ಮುಂದೊಂದು ದಿನ ಹೀಗೆ ತಾನು ಬಿಕೋ ಎನ್ನುವ ಹಾಳು ರಸ್ತೆಯನ್ನು ನೋಡುತ್ತ ನಿಂತಿರುತ್ತೇನೆಂದು? ಸಿಡುಬುರೋಗ ಎಂದರೆ ಏನೆಂದು ಜನರಿಗೆ ಈಗ ಅರ್ಥವಾಯಿತು! ಅದರ ಅಪಾಯ ಎಷ್ಟೆಂದು ಮಂದಿಗೆ ಈಗ ತಿಳಿಯಿತು. ಜನರು ಎಷ್ಟೆಲ್ಲ ಅಲಕ್ಷ್ಯ ಮಾಡಿದರು? ಕಿಟಿಕ್ವಾ ಎನ್ನುವ ದೇವರು ಕೋಪಗೊಂಡಿದ್ದಾನೆ, ಆತ ಊರನ್ನೆ ಹುರಿದು ತಿನ್ನುತ್ತಾನೆ ಎಂದು ಕೆಲವರು ಎಚ್ಚರಿಕೆಯ ಮಾತು ಹೇಳಿದಾಗ ಅವರನ್ನು ಅಪಹಾಸ್ಯ ಮಾಡಿದವರೆ ಹೆಚ್ಚಿದ್ದರು. ಅವರನ್ನು ನೋಡಿ ಜನ ಗಹಗಹಿಸಿ ನಗುತ್ತಿದ್ದರು. ಆದರೆ ಈಗ ಅಳುವ ಸರದಿ ಅವರದಾಗಿದೆ. ನಗುವ ಸರದಿ ಗ್ರಾಮದೇವತೆಯದ್ದಾಗಿದೆ.

ಮೊದಲು ಉಮುರು ಸಣ್ಣ ಹಳ್ಳಿಯಿದ್ದಾಗ ಇಲ್ಲಿ ಎಲ್ಲವೂ ಚೆನ್ನಾಗಿತ್ತು ಎನಿಸುತ್ತದೆ. ಊರ ಗ್ರಾಮಸ್ಥರು ತಮ್ಮ ಊರನ್ನು ತಮಗೆ ಸಾಧ್ಯವಾದ ರೀತಿಯಲ್ಲಿ ತುಂಬ ಆರೋಗ್ಯಕರವಾಗಿ, ಸುಂದರವಾಗಿ ಇಟ್ಟುಕೊಂಡಿದ್ದರು. ಆವಾಗ ಜನಸಂದಣಿಯೂ ಇರಲಿಲ್ಲ ಮತ್ತು ಊರು ಇಷ್ಟು ಪ್ರಸಿದ್ಧವೂ ಆಗಿರಲಿಲ್ಲ. ಆದರೆ ಯಾವಾಗ ಪರದೇಶದ ಜನ ಬಂದರೋ, ಯಾವಾಗ ಹೊರಗಿನಿಂದ ಉದ್ದಿಮೆಗಳು ಬಂದವೋ, ಯಾವಾಗ ಈ ಪಟ್ಟಣ ಸದಾ ಗಿಜಿಗಿಡುವ ರೇವು ಪಟ್ಟಣವಾಗಿ ಬದಲಾಯಿತೋ ಆವಾಗ ಈ ಊರಿನ ನಕ್ಷೆಯೇ ಬದಲಾಯಿತು. ಸುಖವೆನ್ನುವುದು ತುಂಬಿ ತುಳುಕತೊಡಗಿತು. ಆಮೇಲೆ ಕಿಟಿಕ್ವಾ ದೇವತೆ ಸದ್ದಿಲ್ಲದೆ ಕಾಲಿಟ್ಟಳು. ಈಗ ಈ ದೇವತೆಯ ಹೆಸರು ತೆಗೆದರೆ ಸಾಕು, ಊರ ಜನ ಗಡಗಡ ನಡುಗುತ್ತಾರೆ. ಅವಳಂತಹ ಕೆಟ್ಟ ದೇವರು ಜಗತ್ತಿನಲ್ಲಿ ಎಲ್ಲಿಯೂ ಇರಲಿಕ್ಕಿಲ್ಲವೆಂದು ಉಮುರು ಜನರ ಅಂಬೋಣವಾಗಿದೆ. ಈ ಸಿಡುಬು ರೋಗವನ್ನು ಆಕೆ ಯಾಕಾದರೂ ತಂದಳೋ? ಯಾಕಾದರೂ ಅವಳಿಗೆ ಊರು–ಊರುಗಳ ಮೇಲೆ, ಹಳ್ಳಿ–ಹಳ್ಳಿಗಳ ಮೇಲೆ ಇಷ್ಟೊಂದು ಕೋಪವಿದೆ? ಒಂದು ಹಳ್ಳಿಯೊಳಗೆ ಈ ರೋಗ ಹಬ್ಬಿದೆಯೆಂದು ತಿಳಿದರೆ ಸಾಕು, ಆ ಹಳ್ಳಿಯನ್ನು ಎಲ್ಲರೂ ತಿರಸ್ಕರಿಸುವವರೆ. ಎಲ್ಲರೂ ಅಲ್ಲಿಯ ಜನರನ್ನು ಕೀಳಾಗಿ ಕಾಣುವವರೆ. ಜನರಲ್ಲಿ ಮಾನವೀಯತೆಯೆಂಬುದು ಬತ್ತಿಹೋಯಿತೆ?

ಎಷ್ಟೊಂದು ಜನರನ್ನು ಗ್ರಾಮದೇವತೆ ಸಾಯಿಸುತ್ತಿದ್ದಾಳಲ್ಲ. ಅವಳಿಗೆ ಅದರ ಬಗ್ಗೆ ಕಿಂಚಿತ್ತೂ ಮರುಕವಿಲ್ಲ. ಅವಳ ಸಿಟ್ಟು ಯಾವಾಗ ಶಮನವಾಗುತ್ತದೆಯೋ ಗೊತ್ತಿಲ್ಲ. ಅವಳಿಗೆ ಮರುಕ ಬರುವುದು ಹೋಗಲಿ, ಜನ ತಮ್ಮ ಆಸುಪಾಸಿನಲ್ಲಿ ಯಾರಾದರೂ ಸತ್ತಾಗ ಮರುಕ ವ್ಯಕ್ತಪಡಿಸಿದರೂ ಸಾಕು, ಅವಳಿಗೆ ಕೋಪ ಬರುತ್ತದೆಯಂತೆ. ದೇವತೆಯಾದರೂ ಇರಲಿ, ದೇವರಾದರೂ ಇರಲಿ, ಒಟ್ಟಿನಲ್ಲಿ ಅವರಲ್ಲಿ ಜಗತ್ತಿನ ಬಗ್ಗೆ ಒಂದಷ್ಟು ಕಳಕಳಿ ಇರಬೇಕಾಗಿತ್ತೆಂದು ಈತ ಕೆಲವೊಮ್ಮೆ ಆಲೋಚಿಸುತ್ತಿದ್ದ. ಈ ಸಿಡುಬುರೋಗ ಹರಡುವಲ್ಲಿ ದೈವದ ಕೈವಾಡ ಇದೆಯೋ ಇಲ್ಲವೋ ಯಾರಿಗೆ ಗೊತ್ತು? ಜ್ಯೂಲಿಯಸ್ ಯೋಚಿಸಿದಷ್ಟೂ ಅವನ ಗೊಂದಲ ಹೆಚ್ಚಾಯಿತೆ ಹೊರತು ಕಡಿಮೆಯಾಗಲಿಲ್ಲ. ತಾನು ವಿದ್ಯಾವಂತನಾಗಿ ಇಂತಹ ವಿಷಯಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದೆಂದು ಒಂದೊಂದು ಸಲ ಅಂದುಕೊಳ್ಳುವನು. ಆದರೆ ಅತ್ತೆಯನ್ನು ಕಂಡಾಕ್ಷಣ ಅವನ ಧೀರ ನಿಲುವು ಸಡಿಲವಾಗುತ್ತಿತ್ತು. ಆಕೆ ಒಬ್ಬ ಧರ್ಮಿಯ ಕ್ರಿಶ್ಚಿಯನ್‌ಳಾಗಿದ್ದಳು. ದೈವದಲ್ಲಿ ಅಪಾರ ವಿಶ್ವಾಸವನ್ನಿಟ್ಟುಕೊಂಡಿದ್ದಳು. ಚರ್ಚಿನ ಗಾಯಕವೃಂದದಲ್ಲಿ ಜ್ಯೂಲಿಯಸ್ ಸಹ ಇದ್ದುದರಿಂದಲೇ ಆಕೆ ತನ್ನ ಒಬ್ಬಳು ಮಗಳು ಜಾನೆಟ್‌ಳನ್ನು ಇವನಿಗೆ ಮದುವೆ ಮಾಡಿಕೊಡಲು ಒಪ್ಪಿಕೊಂಡಿದ್ದಳು. ದೈವದ ಸಂಕಲ್ಪವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲವೆಂದೇ ನಂಬಿದವಳು ಅವಳು.

ಏಕತಾನತೆಯೆನ್ನುವುದು ಜ್ಯೂಲಿಯಸ್‌ನ ನರನಾಡಿಗಳನ್ನು ತಿನ್ನುತ್ತಿತ್ತು. ನಿರ್ಜನ ಬೀದಿಯನ್ನು ಆತ ಕಿಟಕಿಯಲ್ಲಿ ನೋಡುತ್ತಲೆ ನಿಂತ. ಜಾನೆಟ್ ಮತ್ತು ಅವಳ ತಾಯಿಯನ್ನು ತಾನು ಕಂಡು ಒಂದು ವಾರದ ಮೇಲಾಯಿತು. ಹೋದ ಸಲ ಅವರಲ್ಲಿಗೆ ಹೋದಾಗ ಅವಳ ತಾಯಿ ತುಂಬ ನಯವಾಗಿಯೇ ಹೇಳಿದ್ದಳು: 'ಜ್ಯೂಲಿಯಸ್, ನಾ ಹಿಂಗ ಹೇಳ್ತಾ ಇದೇನಿ ಅಂತ ತಪ್ಪು ತಿಳಕೊಬ್ಯಾಡ. ಈ ರೋಗದ ಹಾವಳಿ ಮುಗಿಯೋತನಕ ನೀ ನಮ್ಮ ಮನಿಗಿ ಬರೋದು ಬ್ಯಾಡ. ದೇವರ ದಯೆಯಿಂದ ಈ ರೋಗದ ಹಾವಳಿ ಲಗೂ ಮುಗೀಲಿ ಅಂತ ನಾ ಬೇಡಕೋತೇನಿ. ನೀನು ಸಹಿತ ನಿನ್ನ ರೂಮ್ ಬಿಟ್ಟು ಹೊರಗ ಬರಬ್ಯಾಡ. ಆಫೀಸಿಗೂ ಬಾಳ ಹುಷಾರಿಂದ ಹೋಗಿ ಬಾ. ಯಾಕಂದ್ರ ರಸ್ತೆಯೊಳಗ ರೋಗ ಯಾರಿಗೆ ಇರತೈತಿ, ಯಾರಿಗೆ ಇರಂಗಿಲ್ಲ ಅಂತ ಹೆಂಗ ಹೇಳೋದು? ನೋಡು,